**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಕಡೂರು.**

**ಸಿಸಿ. ಸಂಖ್ಯೆಃ 732/2024**

ಪಿರ್ಯಾದಿಃ ಶ್ರೀ ಅರ್ಜುನ್-ಪಿ-ಸುದ್ದಿ ಬಿನ್ ದಿವಂಗತ ಫಕೀರಪ್ಪ,
ಸುಮಾರು 41 ವರ್ಷ, ವ್ಯವಸಾಯ,
ವಾಸ ಃ ಸಾಯಿಬಾಬಾ ದೇವಸ್ಥಾನ, ಕಡೂರು ಪಟ್ಟಣ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀ ಕೆ.ಹೆಚ್.ನವೀನ್‌ಕುಮಾರ ಬಿನ್ ಲೇಟ್ ಹನುಮಂತಪ್ಪ,
ಸುಮಾರು 43 ವರ್ಷ, ಮೆಸರ್ಸ್‌ರವಿ ಬಾರ್ ರೆಸ್ಟೋರೆಂಟ್
ಮಾಲೀಕರು, ಹಳೇ ಬಸ್ ನಿಲ್ದಾಣ ರಸ್ತೆ, ಕಡೂರು ಪಟ್ಟಣ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಃಆಪಾದನೆಃ**

ಆರೋಪಿಯಾದ ನೀವು ಪಿರ್ಯಾದುದಾರರಿಂದ ಕೌಟುಂಬಿಕ ಅಗತ್ಯತೆಗಾಗಿ ರೂ.10,00,000/- ಸಾಲವನ್ನು ದಿನಾಂಕಃ08.09.2021 ರಂದು ಪಡೆದಿದ್ದು, ಅದನ್ನು ಮರುಪಾವತಿಸಲು ಆಗದೆ, ಸದರಿ ಭಾದ್ಯತೆಯ ಮರುಪಾವತಿಗಾಗಿ ಪಿರ್ಯಾದುದಾರ ಬ್ಯಾಂಕಿನ ಹೆಸರಿಗೆ ತಲಾ ರೂ.5,00,000/- ICICI, ಕಡೂರು ಶಾಖೆಯ ಚೆಕ್ ನಂಃ 000313 ಮತ್ತು 000314 ರ ಎರಡು ಚೆಕ್ಕುಗಳಲ್ಲಿ ದಿನಾಂಕ ಃ 21.12.2023 ಎಂದು ನಮೂದು ಮಾಡಿ ಪಿರ್ಯಾದುದಾರರ ಬ್ಯಾಂಕಿಗೆ ನೀಡಿದ್ದು, ಸದರಿ ಚೆಕ್ಕುಗಳನ್ನು ಪಿರ್ಯಾದುದಾರರು ತನ್ನ ಖಾತೆ ಇರುವ ICICI Bank, ಕಡೂರು ಶಾಖೆನಲ್ಲಿ ದಿನಾಂಕ 12.01.2024 ರಂದು ನಗದೀಕರಿಸಲು ಹಾಜರುಪಡಿಸಿದಾಗ, ಬ್ಯಾಂಕಿನವರು "Insufficient Balance" ಎಂಬ ಹಿಂಬರಹದೊಂದಿಗೆ ಚೆಕ್ಕುಗಳು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ಹಿಂಬರಹಗಳನ್ನು ನೀಡಿದ್ದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿನಾಂಕಃ 29.01.2024 ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಹಣ ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೆಯ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಆರೋಪಿ ಉತ್ತರ ಃ ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಆರೋಪಿ ಉತ್ತರ ಃ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 2 ನೇ ಡಿಸಂಬರ್, 2024.

-ಸಹಿ-

(ಅಮ್ರಿನ್ ಸುಲ್ತಾನ)
ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.